ಕೈಯಲ್ಲಿಯ ಪರ್ಸ್ ಟೇಬಲ್ ಮೇಲಿಟ್ಟು ಬಟ್ಟೆ ಬದಲಾಯಿಸುವ ಗೋಜಿಗೆ ಹೋಗದೆ ಬೆಡ್ ರೂಂನಲ್ಲಿ ಸರಿದು ಮಂಚಕ್ಕೆ ಮೈನೀಡಿದಳು. ಕೆಲ ನಿಮಿಷಗಳ ನಂತರವೇ ಅವಳ ಅಂತರಂಗದಲ್ಲಿ ನಡೆಯುತ್ತಿದ್ದ ಭಾವನೆಗಳ ಅಲೆದಾಟ ಒಂದು ನಿಲುಗಡೆಗೆ ಬಂತು.

ಎದ್ದು ಬಟ್ಟೆ ಬದಲಾಯಿಸಿ, ಮುಖ ಕೈಕಾಲು ತೊಳೆದುಕೊಂಡು ಟೀ ಮಾಡಿ ಕುಡಿದು ಹೊರಬಂದಳು. ಹೊಟ್ಟೆ ತುಂಬಿದಂತಿತ್ತು. ರಾತ್ರಿಯ ಅಡಿಗೆಯ ಗೊಡವೆಗೆ ಹೋಗಲಿಲ್ಲ. ಬಾಲ್ಕನಿಯಲ್ಲಿ ನಿಂತು ಕೆಳಗೆ ನೋಡಿದಳು. ತಾನೇ ಬೆಳೆಸಿದ ಪುಟ್ಟ ಕೈತೋಟ. ಹಸುರಿನ ನಡುವೆ ಅಲ್ಲಲ್ಲಿ ವರ್ಣರಂಜಿತ ಹೂಗಳರಳಿದ್ದುವು. ಇವತ್ತು ಅರಳಿದ ಹೂಗಳ ಸಂಖ್ಯೆ ಹೆಚ್ಚಾದಂತೆನಿಸಿತು. ಸರಸರನೆ ಕೆಳಗಿಳಿದು ಬಂದಳು. ನಲ್ಲಿಯಿಂದ ಬಕೆಟ್‌ನಲ್ಲಿ ನೀರು ತುಂಬಿ ತಂದು ಗಿಡಗಳಿಗೆ ನೀರೆರೆದಳು. ಆರು ವರ್ಷಗಳಿಂದ ಅವಳ ಕೈನೀರು ಕುಡಿದು ಸುಪುಷ್ಟವಾಗಿ ಬೆಳೆದು ನಿಂತ ಚೆಲುವಿನ ಗಿಡ, ಹೂ. ಮೊಗ್ಗು ಬಿಡದೆ ಗೊಡ್ಡಾಗಿ ನಿಂತಿದೆ. ಒಂದೊಂದು ಸಲ ತನಗರಿಯದಂತೆಯೇ ಅವಳಿಗೆ ಅದರ ಮೇಲೆ ಸಿಟ್ಟು ಬಂದು ಕೆಲದಿನ ಅದಕ್ಕೆ ನೀರೆರೆಯುವುದನ್ನೇ ಬಿಡುತ್ತಾಳೆ. ಮತ್ತೇನೆನಿಸುತ್ತದೋ ಅದರೆಲೆ ಬಾಡಿದಂತಾದಾಗ ಅದರ ಮೇಲೆ ನಾಲ್ಕಾರು ಬಕೆಟ್ ನೀರನ್ನು ಧಬಧಬನೆ ಸುರಿದು ನಿಟ್ಟುಸಿರಿಟ್ಟು ನಿಂತುಬಿಡುತ್ತಾಳೆ.

ಕವಿತಾ ಆ ಗಿಡದ ಹತ್ತಿರ ಸರಿದು ಅದರ ಬೆಡ್ಡಿಗೂ ಒಂದಿಷ್ಟು ನೀರು ಸುರಿದು ಒಳ ಬಂದಳು. ಬೆಡ್‌ರೂಮಿನ ಮಸಕು ಕತ್ತಲೆಗೆ ಅವಳ ಕೈ ಸ್ವಿಚ್ ಅದುಮಿತು. ತಿಳಿಹಸುರಿನ ಮರ್ಕ್ಯುರಿ ದೀಪದ ಬೆಳಕಿನಲ್ಲಿ ಅಲ್ಲಿಯ ವಸ್ತುಗಳೆಲ್ಲ ಸ್ಪಷ್ಟವಾದುವು. ಫ್ಯಾನಿನ ಗುಂಡಿ ಅದುಮಿ ಹಾಸಿಗೆಯ ಮೇಲುರುಳಿದಳು.

ಈಗೀಗ ಅವಳಿಗೆ ನಿದ್ರೆಯೇ ಬರುತ್ತಿರಲಿಲ್ಲ. ನಾಲ್ಕಾರು ದಿನಗಳು ನಿದ್ರೆಯಿಲ್ಲದೆ ದಣಿದ ರೆಪ್ಪೆಗಳು ನಡುವೆ ಒಂದೊಂದು ದಿನ ಒಂದನ್ನೊಂದು ಬಿಗಿಯಾಗಿ ಅಪ್ಪಿಕೊಳ್ಳುತ್ತವೆ. ನಿನ್ನೆಯೂ ನಿದ್ರೆ ಹತ್ತಿರ ಸುಳಿದಿರಲಿಲ್ಲ. ಇವತ್ತೂ ಕಣ್ಣುರೆಪ್ಪೆಗಳು ಒಂದಾಗಲಿಲ್ಲ.

ಇಂದು ನಿನ್ನೆಯಲ್ಲಿಯೇ ಎಷ್ಟು ವ್ಯತ್ಯಾಸ ಎನಿಸಿತು ಅವಳಿಗೆ. ನಿನ್ನೆ ಚಿಂತೆ ಚಿತ್ತಕಲಕಿ ನಿದ್ದೆ ಕೆಡಿಸಿದ್ದರೆ ಇಂದು ಸಂತಸದ ಅಲೆ ರೆಪ್ಪೆಗಳ ನಡುವೆ ನಿಂತುಬಿಟ್ಟಿದೆ. ಅಂತರಂಗದಲ್ಲಿ ಅರಿಯದ ಭಾವಗಳ ಕಚಗುಳಿ. ತನಗೆ ಇಂದೇನಾಗಿದೆ ಎಂದು ಯೋಚಿಸಿದಳು. ಈ ನಡುವೆ ಉತ್ಸಾಹವೇ ಸತ್ತ ಎದೆಯಲ್ಲಿ ಲವಲವಿಕೆ ಮಿಸುಕಾಡುತ್ತಿದೆ. ಬೆಳಗಿನಿಂದ ನಡೆದುದನ್ನೆಲ್ಲ ಒಮ್ಮೆ ನೆನೆದಳು. ಸಂಜೆಯವರೆಗೂ ಅಂಥದೇನೂ ನಡೆದಿರಲಿಲ್ಲ. 'ಹಲೋ' ಇನಿದನಿ, ನಿಲ್ಲುತ್ತಿರುವ ಕಾರಿನ ಚಕ್ರಗಳ ಅಸ್ಪಷ್ಟ ಸದ್ದು. ತಕ್ಷಣ ಹಿಂತಿರುಗಿ ನೋಡಿ ತನ್ನ ಅನ್ಯಮನಸ್ಕತೆಗೆ ತಾನೇ ನಕ್ಕುಬಿಟ್ಟಳು. ತಾನು ಅನುಭವಿಸಿದ ಅವ್ಯಕ್ತ ಅಪ್ಯಾಯಮಾನದ ಬುಗ್ಗೆ, ಕಣ್ಣಲ್ಲಿ ಸಂತೋಷನ ರೂಪ–ಸ್ಥಿರವಾದಂತೆ. 'ಇವರು ಯಾಕೆ ಬೆಂಗಳೂರಿಗೆ ಹೋದರೋ, ಬೇಗ ಬಂದು ಬಿಡಬಾರದೆ' ಎಂದು ಬೇಸರದಿಂದ ಗೊಣಗುಟ್ಟಿಕೊಂಡು ನಿದ್ದೆಯೊಂದಿಗೆ ಸಂಬಂಧ ಬೆಳೆಸಲು ರೆಪ್ಪೆಗೂಡಿಸುವ ವ್ಯರ್ಥ ಪ್ರಯತ್ನದಲ್ಲಿ ಲೀನಳಾದಳು.

ಬೆಳಿಗ್ಗೆ ಒಂಬತ್ತಕ್ಕೆಲ್ಲ ರೆಡಿಯಾಗಿ ಮೇಕಪ್‌ಗೆ ತೊಡಗಿದಳು. ಇದೊಂದೇ ದಿನ. ನಾಳೆಯಿಂದ ಸಂತೋಷ್‌ನ ಹತ್ತಿರ ಸಲುಗೆಗೆ ತೊಡಗಬಾರದು ಎನ್ನುವ ಒಳದನಿಯನ್ನು ಅದುಮುತ್ತ ಹೊರ ಬಂದು ಬಾಗಿಲಿಗೆ ಬೀಗಹಾಕಿ ಮೆಟ್ಟಲಿಳಿದಳು. ಅವಳು ಗೇಟಿನ ಬಳಿ ಬರುವುದಕ್ಕೂ ಸಂತೋಷ್‌ನ ಬೂದು ಬಣ್ಣದ ಇಂಪಾಲಾ ನಿಲ್ಲುವುದಕ್ಕೂ ಸರಿಯಾಯಿತು.

ಸಂತೋಷ ತಾನು ಕೆಳಗಿಳಿದು ಬಂದು ಲೀಲಾಜಾಲವಾಗಿ ಬಾಗಿಲು ತೆಗೆಯುತ್ತ 'ಓ...